**ಓ.ಎಸ್ ನಂಃ 45/2015** **ಡಿ.ಡಬ್ಲ್ಯೂ-1**

**<u>ದಿನಾಂಕಃ 17-01-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಆರ್.ವಿ.ಎನ್.ಕೆ.ವಕೀಲರಿಂದಃ</u>**

ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಈ ದಾವೆಯನ್ನು ನಾವು ಜಮೀನು ಒತ್ತುವರಿ ಮಾಡಿದ್ದೇವೆಂದು ಸಲ್ಲಿಸಿರುತ್ತಾರೆ. ವಾದಿ ಬೇರೆ ಯಾವುದೇ ಪರಿಹಾರ ಕೇಳಿ ಈ ದಾವೆ ಸಲ್ಲಿಸಿರುವುದಿಲ್ಲ. ದಾವಾ ಸರ್ವೆ ನಂ.268 ಆಗಿರುತ್ತದೆ. ಅದು 2 ಎಕರೆ ಜಮೀನು ಆಗಿರುತ್ತದೆ. ದಾವಾ ಸ್ವತ್ತು 2 ಎಕರೆ 2 ಗುಂಟೆ ಎಂದರೆ ಸರಿ. 2 ಗುಂಟೆ ಜಮೀನು ಆ-ಖರಾಬು ಎಂದರೆ ಸರಿ. ನನೆಗೆ ರೆವೈನ್ಯೂ ದಾಖಲೆ ಬಗ್ಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಬಿ ಖರಾಬ ಎಂದು ಯಾವುದೇ ಹಳ್ಳ ಕೊಳ್ಳ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ಮೂಲತಃ ಮುನಿವೆಂಕಟಪ್ಪನ ಮಗ ವೆಂಕಟಗಿರಿಯಪ್ಪನಿಗೆ ಸೇರಿದ್ದು ಎಂದರೆ ಸರಿ. ದಾವಾ ಸ್ವತ್ತು ಮೊದಲಿಗೆ ವೆಂಕಟಗಿರಿಯಪ್ಪ ತಂದೆ ಮುನಿವೆಂಕಟಪ್ಪನಿಗೆ ಖಾತೆ ಮತ್ತು ಪಹಣಿ ಬರುತ್ತಿತ್ತು ಎಂದರೆ ಸರಿ. ಅವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ.

ದಾವಾ ಸ್ವತ್ತು ದಿನಾಂಕಃ- 18-09-1970 ರಂದು ಬಾಲಪ್ಪನ ಮಗ ಗುರಪ್ಪ, ಮುನಿವೆಂಕಟಪ್ಪನ ಮಗ ವೆಂಕಟಗಿರಿಯಪ್ಪನಿಂದ ಖರೀದಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಗುರಪ್ಪ ನನಗೆ ಮುತ್ತಾತನಾಗಬೇಕು ಎಂದು ಹೇಳುತ್ತಾರೆ. ದಿಃ- 18-09-1970 ರಿಂದ ಗುರಪ್ಪ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಗುರಪ್ಪ ತನ್ನ ಜೀವಿತ ಕಾಲದಲ್ಲಿ ದಾವಾ ಸ್ವತ್ತು ತನ್ನ ಹೆಸರಿಗೆ ಖಾತೆ ಮತ್ತು ಪಹಣಿ ಇರುವುದರಿಂದ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿ. ನಾನು ಗುರಪ್ಪ ಖರೀದಿಸಿದ ಜಮೀನು ನೋಡಿರುತ್ತೇನೆ. ಸಾಕ್ಷಿ ಮುಂದುವರಿದು ನಾನು ಗುರಪ್ಪನಿಗೆ ಒಬ್ಬ ವಾರಸುದಾರನಾಗಬೇಕು. ಗುರಪ್ಪ ಖರೀದಿಸಿರುವ ಸ್ವತ್ತು ಸರ್ವೇ ನಂ.268 ರಲ್ಲಿ 2 ಎಕರೆ ಜಮೀನು 2 ಗುಂಟೆ ಖರಾಬು ಖರೀದಿಸಿದ್ದು ಆದರೆ ದಾವೆಯಲ್ಲಿ 3 ಎಕರೆ ಜಮೀನಿಗೆ ಚಕ್ಕಬಂದಿ ಗ್ರಾಮಠಾಣಾ ಸೇರಿಸಿ ತೋರಿಸಿರುತ್ತಾರೆ ಎಂದು ಹೇಳುತ್ತಾರೆ. ಗುರಪ್ಪ ತಾನು ಖರೀದಿಸಿರುವ 2 ಎಕರೆ 2 ಗುಂಟೆ ಜಮೀನಿನಲ್ಲಿ ಸ್ವಾಧೀನ ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ನಾವೆಲ್ಲ ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಗುರಪ್ಪ ಖರೀದಿಸಿರುವ ಸ್ವತ್ತಿನ

ಕ್ರಯಪತ್ರ ನಾನು ಓದಿ ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಕ್ರಯಪತ್ರದಲ್ಲಿ ಮಾರಮ್ಮನ ಜಮೀನು ಎಂದು ತೋರಿಸಿರುತ್ತಾರೆ ಎಂದರೆ ಸರಿ. ಪಶ್ಚಿಮಕ್ಕೆ ಗ್ರಾಮನತ್ತಾ ಬರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಗೋಮಾಳ ಬರುತ್ತದೆ ನಂತರ ಗ್ರಾಮಠಾಣಾ ಬರುತ್ತದೆ ಎಂದು ಹೇಳುತ್ತಾರೆ. ಉತ್ತರಕ್ಕೆ ನಾರಾಯಣಪ್ಪ ಮತ್ತು ಗೋಮಾಳ ಬರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಗೋಮಾಳ ನಂತರ ನಾರಾಯಣಪ್ಪನ ಜಮೀನು ಬರುತ್ತದೆ ಎಂದು ಹೇಳುತ್ತಾರೆ. ನಾನು ನಾರಾಯಣಪ್ಪನಿಗೆ ನೋಡಿರುವುದಿಲ್ಲ. ನಾರಾಯಣಪ್ಪ ತೀರಿಹೋಗಿದ್ದು ಅವರ ಮಗ ಜೆಲ್ಲಪ್ಪ ಈಗ ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಅವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ದಕ್ಷಿಣ ದಿಕ್ಕಿಗೆ ಸೀನಪ್ಪ ಮತ್ತು ಮುನಿಸ್ವಾಮಿ ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ಬೇರೆಯವರು ಕೂಡ ಅಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ಈಗ ಮೇಲೆ ಹೇಳಿದ ಚಕ್ಕಬಂದಿ ಗುರಪ್ಪ ಖರೀದಿಸಿರುವ ಸ್ವತ್ತು ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಮೂರು ಎಕರೆ ಚಕ್ಕಬಂದಿ ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಗುರಪ್ಪ 2 ಎಕರೆ 2 ಗುಂಟೆ ಜಮೀನು ಖರೀದಿಸಿದ್ದು ಆದರೆ ಚಕ್ಕಬಂದಿ 3 ಎಕರೆ ತೋರಿಸಿದ್ದಾರೆಂದು ಹೇಳಿರುತ್ತೇನೆ. ವೆಂಕಟಗಿರಿಯಪ್ಪ ತಂದೆ ಮುನಿವೆಂಕಟಪ್ಪ ತಾನು ಮಾರಾಟ ಮಾಡಿದ ಜಮೀನು ಗುರಪ್ಪ ಹೆಚ್ಚಿನ ವಿಸ್ತೀರ್ಣ ತೋರಿಸಿರುವ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನು ವೆಂಕಟಗಿರಿಯಪ್ಪನನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ.

ಸಾಕ್ಷಿ ಮುಂದುವರಿದು ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನಾರಾಯಣಪ್ಪನ ಜಮೀನು ಬರುತ್ತದೆ ನಂತರ ಕರಿಕಲ್ ಗುಟ್ಟೆ ಮತ್ತು ತಮಿಳುನಾಡು ಗಡಿ ಬರುತ್ತದೆ ಎಂದು ಹೇಳುತ್ತಾರೆ. ನಾನು ದಾವಾ ಸ್ವತ್ತಿನ ಚಕ್ಕಬಂದಿ ಬಗ್ಗೆ ನನ್ನ ವಕೀಲರಿಗೆ ಪ್ರತಿವಾದ ಪತ್ರದಲ್ಲಿ ಬರೆಯುವಂತೆ ಹೇಳಿರುವುದಿಲ್ಲ. ಗುರಪ್ಪ 1970 ರಲ್ಲಿ ಖರೀದಿಸಿರುವ ದಾವಾ ಸ್ವತ್ತಿನ ಚಕ್ಕಬಂದಿ ಕ್ರಯಪತ್ರದಲ್ಲಿ ಸರಿ ಇರುತ್ತದೆ ಎಂದರೆ ಸುಳ್ಳು. ನಾನು ಶ್ರೀನಿವಾಸಪ್ಪ ರವರ ಕಡೆಯಿಂದ 30 X 25 ಅಡಿ ಜಾಗ 2012 ರಲ್ಲಿ ಖರೀದಿಸಿರುತ್ತೇನೆ. ಶ್ರೀನಿವಾಸಪ್ಪನ ಹತ್ತಿರ ಹಕ್ಕು ಪತ್ರ ಇರುವುದರಿಂದ ನಾನು ಆಸ್ತಿ ಖರೀದಿಸಿರುತ್ತೇನೆ. ಶ್ರೀನಿವಾಸಪ್ಪನವರಿಗೆ 1991 ರಲ್ಲಿ ಆಸ್ತಿ ಮಂಜೂರಾಗಿದೆ. ನಿಡಿ-1 ರಲ್ಲಿ ಶ್ರೀನಿವಾಸಪ್ಪನಿಗೆ ಆಸ್ತಿ ಹೇಗೆ ಬಂತು

ಎಂದು ನಮೂದಿಸಿರುವುದಿಲ್ಲ ಎಂದರೆ ಸುಳ್ಳು. ಶ್ರೀನಿವಾಸಪ್ಪನಿಗೆ 1991 ರಲ್ಲಿ ಯಾವುದೇ ಆಸ್ತಿ ಮಂಜೂರು ಆಗಿರುವುದಿಲ್ಲ ಎಂದರೆ ಸುಳ್ಳು. ಶ್ರೀನಿವಾಸಪ್ಪನಿಗೆ 1991 ರಲ್ಲಿ ಯಾರು ಅಧಿಕಾರಿಗಳು ಇದ್ದರು ಅವರೇ ಆಸ್ತಿ ಮಂಜೂರು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಯಾವುದೇ ನಿವೇಶನ ಮಂಜೂರು ಮಾಡಬೇಕಾದರೆ ಆ ವ್ಯಕ್ತಿ ಸದರಿ ಗ್ರಾಮದಲ್ಲಿ ವಾಸವಾಗಿರಬೇಕು ಎಂದರೆ ಸರಿ. 2 ನೇ ಪ್ರತಿವಾದಿ ಶ್ರೀನಿವಾಸ ಚೆನ್ನಸಂದ್ರ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ 2 ನೇ ಪ್ರತಿವಾದಿ ಬೆಂಗಳೂರಿಗೆ ಕೆಲಸಕ್ಕೆ ಹೋಗುವ ಮುಂಚೆ ನನಗೆ ನಿವೇಶನ ಮಾರಾಟ ಮಾಡಿರುತ್ತಾರೆ. ಸಾಕ್ಷಿ ಮುಂದುವರಿದು ಶ್ರೀನಿವಾಸ ಬೆಂಗಳೂರಿಗೆ ಕೆಲಸಕ್ಕೆ ಹೋಗುವುದು ಬರುವುದು ಮಾಡುತ್ತಿದ್ದರು. ಅಲ್ಲಿಗೆ ಹೋಗಿ ಸೆಟ್ಲ್ ಆಗುವ ಮುಂಚೆ ನನಗೆ ನಿವೇಶನ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.
ಸಹಿ/-
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**